ಹೊರಗೆ ಬಿಟ್ಟು ಬಂದ ಅದೇ ಪ್ರಪಂಚ, ಬಂಧನದ ಚಕ್ರ, ಬಂಧು ಸ್ನೇಹ ಮೋಹ ಮಮಕಾರಗಳ ಹುತ್ತ, ಸಾವು ನೋವಿನ ಸುಳಿ, ಅವುಗಳ ಗೊಡವೆಯೇ ಬೇಡವೆಂದು ಬಿಟ್ಟು ಬಂದ ಹಾದಿಯಲ್ಲಿ ಮತ್ತೆ ತಿರುಗಿ ಹೋಗಿ ಅದೇ ಬದುಕನ್ನು ಬದುಕಲೇ? ಅಥವಾ ಇಲ್ಲೇ ಈ ಪ್ರಕ್ರತಿಯ ಮಡಿಲಲ್ಲೇ ಉಳಿದು ಬಿಡಲೇ?

ಇಲ್ಲಿನ ವಾತಾವರಣದಲ್ಲಿ ತನಗೆ ಬದುಕಲು ಸಾಧ್ಯವೇ? ಪ್ರಾಣಿಗಳಂತೆ ತಾನು ಯಾವುದೇ ವ್ಯವಸ್ಥೆ ಇಲ್ಲದೇ ಅವುಗಳಂತೇ ಇಲ್ಲಿ ಜೀವಿಸಲಾದೀತೇ? ಸಾವನ್ನೇ ಸ್ವೀಕರಿಸಲು ಬಂದವನಿಗೆ ಇನ್ನು ತನ್ನ ಜೀವನದಲ್ಲಿ ಶೇಷ ಉಳಿದಿರುವುದಾದರೂ ಏನು? ಅದು ಹೇಗೆ ಯಾವ ರೂಪದಲ್ಲಿ ಬಂದರೂ ಸ್ವಿಕರಿಸಿಬಿಡುವುದು! ಹಾಗೆಂದುಕೊಳ್ಳುತ್ತಿರುವಾಗಲೇ ಅವನ ಆಲೋಚನಾ ಲಹರಿಯನ್ನು ತುಂಡರಿಸಿತೊಂದು ಶಬ್ದ. ಅವನು ಫಕ್ಕನೇ ಕತ್ತನ್ನು ಹೊರಳಿಸಿ ನೋಡಿದವನ ಗಂಟಲ ದ್ರವ ಆರಿತು. ಅವನ ತೀರಾ ಸಮೀಪದಲ್ಲಿ ಒಂದು ಕಡವೆ ನಿಂತು ಅವನೆಡೆಗೆ ಅವರ ಸ್ವತಂತ್ರ ಪರಿಸರದಲ್ಲಿ ಕಂಡು ಬಂದ ಈತನನ್ನು ಅಚ್ಚರಿ ಬೆರೆತ ನೋಟ ನೆಟ್ಟು ನಿಂತಿತ್ತು. ಅದರ ತಲೆಯ ಮೇಲಿನ ಕೊಂಬುಗಳು ಸುಮಾರು ಎರಡಿಡಿಯಷ್ಟು ಉದ್ದ ಇದ್ದವು. ಅದರ ಕೊಂಬು ತುದಿಯಲ್ಲಿ ಮತ್ತೆ ಸಮಭಾಗಗಳಾಗಿ ಕವಲೊಡೆದಿತ್ತು. ಅದರ ಕುತ್ತಿಗೆಯ ಭಾಗದಲ್ಲಿ ಕೂದಲುಗಳು ಉದ್ದವಾಗಿ ಜೋತು ಬಿದ್ದಿದ್ದವು. ಮನುಷ್ಯನೊಬ್ಬ ತನ್ನ ವಾಸಸ್ಥಳವನ್ನು ಅತಿಕ್ರಮಿಸಿದಕ್ಕಾಗಿ ಅದು ಅಚ್ಚರಿ–ಭಯ ಮಿಶ್ರಿತ ನೋಟ ಹರಿಸಿ ನಿಂತಿದ್ದರೆ ಕಾಯಕನಾಥನ ಸ್ಥಿತಿಯೂ ಭಿನ್ನವಾಗಿರಲಿಲ್ಲ. ಅವನು ತಕ್ಷಣವೇ ಎಚ್ಚೆತ್ತವನಂತೆ ಭಯದಿಂದ ಸರಸರನೇ ಅದೇ ಮರವೇರಿ ಕೊಂಬೆಯ ಮೇಲೆ ಕುಳಿತುಕೊಂಡ. ಆ ಕಡವೆ ಸ್ವಲ್ಪ ಹೊತ್ತು ಮೇಲೆ ನೋಡುತ್ತಿದ್ದು ತನ್ನ ಹಾದಿ ಹಿಡಿದು ಹೊರಟುಹೋಯಿತು. ಅದು ಬಹುಶಃ ಆ ಹೊತ್ತಿಗೆ ತನ್ನ ಆಹಾರ ಹುಡುಕಿಕೊಂಡು ಬಂದಿರಬೇಕು ಎಂದೆನಿತು. ಮೆಲ್ಲನೆ ಮರದಿಂದಿಳಿದು ಆ ಕಡವೆ ಹೋದ ದಿಕ್ಕಿನತ್ತ ಹೆಜ್ಜೆ ಹಾಕಿದ. ಕತ್ತಲು ದಟ್ಟವಾಗತೊಡಗಿದಂತೇ ಸಣ್ಣಗೆ ನೀರು ಹರಿವ ಶಬ್ದ ಕೇಳಿಸಿತು. ಕಿವಿ ನಿಮಿರಿಸಿ ಆಲಿಸಿದ. ನಿಸ್ಸಂಶಯವಾಗಿ ಅದು ಹರಿವ ನೀರಿನ ಜುಳುಜುಳು ಶಬ್ದ. ಆ ಪ್ರಾಣಿ ತನ್ನ ದಾಹ ತೀರಿಸಿಕೊಳ್ಳಲೇ ಬಂದಿರಬೇಕೆಂದು ಕಾಯಕನಾಥನಿಗೆ ದೃಢವಾಯಿತು. ಆ ನೀರಿನ ಶಬ್ದ ಬಂದೆಡೆಗೆ ಹೆಜ್ಜೆ ಹಾಕಿದವನು ಅನತಿ ದೂರದಲ್ಲಿ ಸಣ್ಣಗೆ ಹರಿವ ಹೊಳೆ ಕಂಡು ಅವನ ಮನಸ್ಸು ಅ ನೀರಿನಷ್ಟೇ ತಿಳಿಯಾಯಿತು.

ಏಕಾಏಕಿ ದಾಹ ಮೂಡಿ ಧಾವಿಸಿ ಹೋದವನು ಬೋರಲು ಬಿದ್ದು ಹರಿವ ನೀರಿಗೆ ಬಾಯಿ ಹಾಕಿ ಹೊಟ್ಟೆ ತುಂಬಾ ನೀರು ಕುಡಿದ. ಅವನಿಗೆ ನೀರು ಅಷ್ಟು ಸಿಹಿಯಾಗಿಯೂ ಇರುತ್ತದೆ ಎಂದು ಎಂದೂ ಅನ್ನಿಸಿದ್ದಿಲ್ಲ. ಅಥವಾ ಅದರ ನಿಜವಾದ ಮಹತ್ವ ಇಂದು ಮನವರಿಕೆಯಾಯಿತೋ ಅವನು ಮಂಗಳೂರಿನಲ್ಲಿದ್ದಾಗ ಆಸೆಯಿಂದ ಸಮುದ್ರ ನೋಡಲು ಹೋಗುತ್ತಿದ್ದದ್ದೇ ಹೆಚ್ಚು. ಇನ್ನು ಸೋದಾಪುರದಲ್ಲಿದ್ದ ಕೋಣೆಯ ಹಿಂಭಾಗದಲ್ಲಿ ಸಣ್ಣ ಹೊಳೆಯಿತ್ತಾದರೂ ಅಲ್ಲಿನ ಕಾರ್ಮಿಕರು ಅಲ್ಲೇ ಬಟ್ಟೆ, ಪಾತ್ರೆ, ಸ್ನಾನದ ಜೊತೆಗೆ ಎಲ್ಲವೂ ಅಲ್ಲೇ ಮುಗಿಸುತ್ತಿದ್ದರಿಂದ ಅದರ ನಿರ್ಮಲತೆ ಸಂಪೂರ್ಣವಾಗಿ ಕುಲಗೆಟ್ಟು ಹೋಗಿತ್ತು. ಇಲ್ಲಿ ಶುದ್ಧ ವಾತಾವರಣದಲ್ಲಿ ಇಂಥ ಸಿಹಿ ನೀರಿನ ತೊರೆ ಕಂಡಾಗ ಅದ್ಭುತ ನೋಡಿದಂತಾಗಿತ್ತು ಅವನ ಸ್ಥಿತಿ. ತಾನು ಇದೇ ತಾಣದಲ್ಲಿರುವುದು ಸೂಕ್ತ ಎಂದು ಅವನಿಗೆ ತೋರಿತು. ಸುತ್ತಮುತ್ತಲೂ ದೃಷ್ಟಿ ಹರಿಸಿದವನಿಗೆ ಅಗಲೇ ಕತ್ತಲು ಕವಿದು ಮಬ್ಬಾಗಿದ್ದರಿಂದ ಅಲ್ಲೇ ಸಮೀಪದ ಅಗಲವಾದ ಕಾಂಡವಿದ್ದ ಮರವೊಂದರ ಬುಡದಲ್ಲಿ ಕಾಲು ಚಾಚಿ ಕುಳಿತ. ಅವನಿಗೆ ಆಯಾಸದಿಂದ ನಿದ್ದೆ ಒತ್ತರಿಸಿ ಬರುತ್ತಿತ್ತಾದರೂ, ಅಡವಿಯಾದ್ದರಿಂದ ಕಾಡು ಪ್ರಾಣಿಗಳು ಎಲ್ಲಿ ದಾಳಿ ಮಾಡುತ್ತವೋ ಎಂಬ ಭಯವಿತ್ತು. ಚಂದ್ರನ ಮಂದ ಬೆಳಕು ಸುತ್ತಲೂ ಪಸರಿಸಿತ್ತು. ಹಾಗೇ ಸುತ್ತಲೂ ಮಬ್ಬು ಕತ್ತಲಲ್ಲಿ ಅಡವಿಯೊಳಗೆ ನಿರುಕಿಸುತ್ತಾ ಕುಳಿತವನಿಗೆ ನಿದ್ದೆ ಯಾವ ಮೋಡಿಯಲ್ಲಿ ಆವರಿಸಿತೋ ತಿಳಿಯಲಿಲ್ಲ. ದೇಹದ ಶಕ್ತಿ ಸೋರಿ ಆಯಾಸವಾಗಿತ್ತೋ, ಮನಸ್ಸಿನ ಬೇಗುದಿ ಶಮನವಾಗಿತ್ತೋ, ನೀರು ಕುಡಿದು ಹೊಟ್ಟೆ ತುಂಬಿತ್ತೋ ಅಂತೂ ದೇಹ–ಮನಸ್ಸು ನಿದ್ದೆಗೆ ಶರಣಾಗಿತ್ತು.

ದೇಹದ ಮೇಲೆ ಏನೋ ಚಲಿಸುತ್ತಿರುವಂತೆ ಭಾಸವಾಗಿ ಎಚ್ಚರಗೊಂಡ ಕಾಯಕನಾಥ. ನೋಡಿದರೆ ಅವನ ಮೈಮೇಲೆ ದೊಡ್ಡ ಗಾತ್ರದ ಜೇಡವೊಂದು ಯಾವ ಅಳುಕಿಲ್ಲದೇ ಸಾಗಿ ಮೇಲೇರಿ ಬರುತ್ತಿತ್ತು. ಅದನ್ನು ಕೈಯಿಂದ ಕೊಡವಿ ಎದ್ದು ನಿಂತ. ಸೂರ್ಯ ರಶ್ಮಿ ಸುತ್ತಲಿನ ಮರಗಳ ಸಂದಿನಿಂದ ಒಳ ನುಸುಳಿ ಚಂದದ ಬೆಳಗು ಮೂಡಿಸಿತ್ತು. ಸುತ್ತಲಿನ ಪರಿಸರ ನೀರಿನ ತೇವಕ್ಕೋ, ಶೀತಲ ತಂಗಾಳಿಗೋ ಅವನಿಗೆ ಚಳಿಯಿಂದ ಬೇಗನೇ ಎಚ್ಚರಗೊಂಡಿತ್ತು. ಮತ್ತೆ ಹೋಗಿ ನೀರು ಕುಡಿದು ತುಸು ಚೇತರಿಸಿಕೊಂಡ. ಅಲ್ಲೇ ಕುಳಿತಿರಲಾರದೇ ಸ್ವಲ್ಪ ಅಡ್ಡಾಡಿದವನು ಆ ಸ್ಥಳ ತನಗೆ ಸಮರ್ಪಕವಾಗಬಹುದೆಂದು ತನ್ನೊಳಗೇ ನಿರ್ಧರಿಸಿಕೊಂಡ. ಏಕೆಂದರೆ ಅಲ್ಲಿ ಮರಗಳ ದಟ್ಟಣೆ ಅಷ್ಟೊಂದು ಇರಲಿಲ್ಲ. ಇದುವರೆಗೂ ಅವನಿಗೆ ಅಂಥ ಯಾವ ಕಾಡು ಪ್ರಾಣಿಯೂ ಕಾಣದ್ದರಿಂದ ಈ ಜಾಗ ತನ್ನ ಪಾಲಿಗೆ ಕ್ಷೇಮವೆಂದು ಒಳಗೇ ನಿರ್ಧರಿಸಿಕೊಂಡ. ದೇಹ ಬಾಧೆ ಮುಗಿಸಿಕೊಂಡವನಿಗೆ ಸ್ವಲ್ಪ ಹೊತ್ತಿನಲ್ಲೇ ಹಸಿವು ಕಾಣಿಸಿಕೊಂಡಾಗ ತನ್ನೊಳಗೇ ನಕ್ಕ.

'ಹಸಿವೆನ್ನುವುದು ಎಷ್ಟು ಕ್ರೂರ ಅದು ಮನುಷ್ಯನನ್ನು ತನ್ನಂಕೆಯಂತೆ ಹೇಗೆಲ್ಲಾ ನಿಯಂತ್ರಿಸುತ್ತದೆ ಮನುಷ್ಯನಿಗೆ ಹೊಟ್ಟೆಯ ಹಸಿವು, ಕಾಮದ ಹಸಿವು, ಜ್ಞಾನದ ಹಸಿವು, ಹಣದ ಹಸಿವು, ಮಹತ್ವಾಕಾಂಕ್ಷೆಗಳ ಹಸಿವು ಇವನ್ನೆಲ್ಲ ತೀರಿಸಿಕೊಳ್ಳುವ ಯತ್ನದಲ್ಲೇ ತನ್ನ ಇಡೀ ಆಯುಷ್ಯವನ್ನು ಕಳೆದುಬಿಡುತ್ತಾನೆ. ಜೀವನದ ಮೇಲೆ ಜಿಗುಪ್ಸೆ ಹೊಂದಿ ಎಲ್ಲವನ್ನೂ ತೊರೆದು ಬಂದ ತನಗೇಕೆ ಈ ಹಸಿವಿನ ಗೊಡವೆ. ಹೇಗೂ ವಿರಕ್ತಿ ಬಂದಾಗಿದೆ ಹೀಗೆ ಕುಳಿತು ಜೀವ ತೊರೆದುಬಿಡುವುದು... ಅದೇ ಸರಿ ಎಂದು ನಿರ್ಧರಿಸಿ ಹಾಗೇ ನಿಶ್ಚಲನಾಗಿ ಕುಳಿತ ಕಾಯಕನಾಥ.

ಆದರೆ ಸ್ವಲ್ಪ ಹೊತ್ತಷ್ಟೇ ಅವನ ತಲೆಯ ಮೇಲಿಂದ ಹಳದಿ ಬಣ್ಣಕ್ಕೆ ತಿರುಗಿ ಪಕ್ವವಾದ ಹಣ್ಣೊಂದು ನೆಲದ ಮೆಲೆ ಬಿತ್ತು. ಅದನ್ನು ಎತ್ತಿಕೊಂಡವನು ಮರದ ಮೇಲೆ ಕಣ್ಣು ಹಾಯಿಸಿದ. ಹಕ್ಕಿಗಳು ತಮ್ಮ ಕೊಕ್ಕಿನಿಂದ ಹಣ್ಣನ್ನು ಕುಕ್ಕಿ ತಿನ್ನುವುದರಲ್ಲಿ ತಲ್ಲೀನವಾಗಿದ್ದು ಅವನ ಕಣ್ಣಿಗೆ ಬಿತ್ತು. ಪ್ರತಿಯೊಂದು ತುತ್ತಿನಲ್ಲೂ ಭಗವಂತ ಅದನ್ನು ತಿನ್ನುವವರ ಹೆಸರು ಬರೆದಿರುತ್ತಾನೆ. ತನ್ನ ಪಾಲಿಗೆ ಇದರ ಋಣವಿದೆ ಎಂದುಕೊಂಡ. ಅದನ್ನು ಕಂಡೊಡನೆ ಹಸಿವು ಮತ್ತೆ ಸದ್ದು ಮಾಡುತ್ತಿದೆ ಎನಿಸಿ ಬೇರೇನೂ ಯೋಚಿಸದೆ ಆ ಹಣ್ಣನ್ನು ಸೇವಿಸತೊಡಗಿದ. ಸಿಹಿ, ಸ್ವಲ್ಪ ಹುಳಿ ಮಿಶ್ರಿತ ಹಣ್ಣು ಯಾವುದೆಂದು ತಿಳಿಯಲಿಲ್ಲ. ಆದರೆ ಹಸಿವು ನೀಗಿಸಲು ಹಣ್ಣು, ಜೊತೆಗೆ ನೀರಿದೆ ಎನಿಸಿದಾಗ ಅವನಿಗೆ ಬೇರೇನೂ ಬೇಕೆಂದೆನ್ನಿಸಲಿಲ್ಲ. ನಿರುಮ್ಮಳನಾಗಿ ಹಾಗೇ ಕಾಲು ಚಾಚಿ ಅಡ್ಡಾದ. ಮಂಗಳೂರಿನಲ್ಲಿ ಕಟ್ಟಡದ ಕೆಲಸ ಮಾಡಿಕೊಂಡು ನಗರ ಜೀವನದ ಕಾಂಕ್ರೀಟಿನ ಕಾಡಿನೊಳಗೇ ಬದುಕಿ ಬಂದ ಅವನಿಗೆ ಈ ಏಕಾಂತ, ಹಸಿರು ಪರಿಸರ ದಿವ್ಯಾನುಭೂತಿ ನೀಡಿತ್ತು. ಇಲ್ಲಿ ಎಷ್ಟೊಂದು ನೆಮ್ಮದಿ ಇದೆ ಹಿತವಿದೆ ಇಲ್ಲಿ ಯಾವ ತೆರನಾದ ಪ್ರಲೋಭನೆ ಇಲ್ಲ. ಹಣ, ಆಸ್ತಿ, ಕೆಲಸ, ಸಂಪಾದನೆ, ಉಳಿತಾಯ, ಸೈಟು ಎಂದು ಅದರ ಹಿಂದೆ ಓಡುವ ಮನುಷ್ಯ ಇಲ್ಲ ಪ್ರತಿಷ್ಠೆ ಇಲ್ಲ... ಅಂಥ ವ್ಯವಸ್ಥೆಯಡಿ ಸಿಲುಕಿ ನಲುಗುವ ಪ್ರಮೇಯವಿಲ್ಲ ಮನುಷ್ಯ ಅದೇ ಸಾಧನೆ ಎಂದು ತನ್ನನ್ನು ಯಂತ್ರದಂತೆ ಪರಿವರ್ತಿಸಿಕೊಂಡು ಆ ಬಯಕೆಗಳ ಚಕ್ರ ಕಟ್ಟಿಕೊಂಡು ಓಡುತ್ತಾನೆ. ಅಂಥ ಓಟ ಇಲ್ಲಿಲ್ಲ, ಇಲ್ಲಿ ಪ್ರಕ್ರತಿಯೊಂದೇ ಇದೆ, ಅದರೊಂದಿಗೆ ಅನುಸಂಧಾನವಿದೆ ಇದೇ ತನ್ನ ಮಡಿಲಾಗಬೇಕು ಇದೇ ತನ್ನ ಉಸಿರಾಗಬೇಕು.

ಕಾಯಕನಾಥನ ಯೋಚನಾ ಲಹರಿಯನ್ನು ಆನೆಗಳ ಘೀಳಿನ ಶಬ್ದ ತುಂಡರಿಸಿತು. ಅವು ನೀರು ಕುಡಿಯಲು ಈ ಹೊಳೆಗೆ ಬರುತ್ತಿರಬೇಕೆಂದು ಅವನಿಗೆ ಸ್ಪಷ್ಟವಾಯಿತು. ಅವನು ಭಯದಿಂದ ಸರಸರನೇ ಮರವೇರಿ ಕುಳಿತ. ಅವನು ನೋಡುತ್ತಿದ್ದಂತೇ ಐದು ಆನೆಗಳು, ಎರಡು ಮರಿಗಳ ಹಿಂಡೊಂದು ಬಂದು ಮನ ತಣಿಯೇ ನೀರು ಕುಡಿದು ತಮ್ಮ ದಾಹ ಇಂಗಿಸಿಕೊಂಡವು. ಮೈಮೇಲೆ ನೀರು ಸುರಿದುಕೊಂಡು ಕ್ರೀಡೆಯಾಡಿದವು. ಕಾಯಕನಾಥ ಆನೆಗಳನ್ನು ಅಷ್ಟು ಹತ್ತಿರದಿಂದ ಎಂದೂ ನೋಡಿರಲಿಲ್ಲ. ಉಸಿರು ಬಿಗಿ ಹಿಡಿದುಕೊಂಡು ಅವುಗಳತ್ತ ನೋಡುತ್ತಾ ಕುಳಿತವನಿಗೆ, ತುಸು ಹೊತ್ತು ಕಳೆದು ತಾವು ಬಂದ ಮಾರ್ಗದಲ್ಲೇ ಸರಿದು ಹೋದ ಬಳಿಕ ಅವನು ಕೆಳಗಿಳಿದ.

ತಾನು ಎಣಿಸಿದಂತೆ ಕಾಡು ಮನುಷ್ಯನಿಗೆ ವಾಸಿಸಲು ಯೋಗ್ಯ ತಾಣವೇ? ಈ ಪ್ರಾಣಿಗಳ ಮಧ್ಯದಲ್ಲಿ ತನ್ನಂಥ ನಾಗರಿಕ ವ್ಯವಸ್ಥೆಯಿಂದ ಬಂದ ಮನುಷ್ಯ ಇಲ್ಲಿ ಮೂಲಭೂತ ಸೌಕರ್ಯಗಳೇ ಇಲ್ಲದೇ ಬದುಕಲು ಸಾಧ್ಯವಿಲ್ಲ. ತಾನೇನು